# ಶಾರ್ಟ್ಸ್ ರಚಿಸುವ ವಿಇಒ3 ಎಐ



**ಕಂಟೆಂಟ್ ಕ್ರಿಯೇಟರ್ಸ್ ಮಾಡುವ ಕೆಲಸವನ್ನು ಮಾಡುವಂತಹ ಫೀಚರ್ ಪರಿಚಯಿಸಲು ಯೂಟ್ಯೂಬ್ ಮುಂದಾಗಿದ್ದು, ಇದರಿಂದ ಕಂಟೆಂಟ್ ಕ್ರಿಯೇಟರ್ಸ್‌ಗೆ ಹಿನ್ನಡೆಯಾಗುವ ಸಾಧ್ಯತೆ ಇದೆ.**

■ ಶಶಿಕುಮಾರ್ ಸಿ.

ಕಂಟೆಂಟ್ ಕ್ರಿಯೇಟರ್ಸ್ ಮಾಡುವ ವಿಡಿಯೊಗಳನ್ನು ರಚಿಸುವ 'ವಿಇಒ3' (Veo3) ಎಂಬ ಕೃತಕ ಬುದ್ಧಿಮತ್ತೆ ಆಧರಿತ ತಂತ್ರಜ್ಞಾನವನ್ನು ಗೂಗಲ್ ಈಚೆಗೆ ಪರಿಚಯಿಸಿದ್ದು, ಇದು ಶೀಘ್ರವೇ ಯೂಟ್ಯೂಬ್‌ನಲ್ಲಿ ಲಭ್ಯವಾಗಲಿದೆ. ದಿನ, ವಾರ, ತಿಂಗಳು ಇಡೀ ಕಂಟೆಂಟ್ ಕ್ರಿಯೇಟರ್ಸ್ ಮಾಡುವ ಕಾರ್ಯವನ್ನು ಈ 'ವಿಇಒ 3' ಕ್ಷಣಾರ್ಧದಲ್ಲಿ ಮಾಡಲಿದೆ.

ವಿಡಿಯೊ ಸ್ಟ್ರೀಮಿಂಗ್ ದೈತ್ಯ ಕ್ಯಾಮೆರಾ, ಎಡಿಟ್ ಅಥವಾ ನಟನಾ ಕೌಶಲವಿಲ್ಲದೆಯೇ ವಿಡಿಯೊಗಳನ್ನು ರಚಿಸಬಹುದಾದ ಹೊಸ ಎಐ ಫೀಚರ್ ಇದಾಗಿದ್ದು, ಇದಿನ್ನೂ ಪರೀಕ್ಷಾ ಹಂತದಲ್ಲಿದೆ. ಈ ಫೀಚರ್ ಗೂಗಲ್‌ನ ಹೊಸ ಎಐ ತಂತ್ರಜ್ಞಾನವಾಗಿದ್ದು, ಯೂಟ್ಯೂಬ್ ಶಾರ್ಟ್ಸ್‌ನ ಜೊತೆಗೆ ಸಂಯೋಜಿಸಲಾಗುತ್ತದೆ ಎಂದಿದೆ ಯೂಟ್ಯೂಬ್.

ಈಚೆಗೆ ಕಂಟೆಂಟ್ ಕ್ರಿಯೇಟರ್ಸ್ ಮನೆಮನೆಗಳಲ್ಲಿ ಉದ್ಭವಿಸುತ್ತಿದ್ದಾರೆ. ದೈನಂದಿನ ಚಟುವಟಿಕೆ, ಜೀವನಶೈಲಿ, ಪ್ರವಾಸ, ಆಹಾರ, ತಂತ್ರಜ್ಞಾನ, ಆಟೊಮೊಬೈಲ್, ಪರಿಸರ, ಆರೋಗ್ಯ, ರಾಜಕೀಯ ಹೀಗೆ ಒಂದಿಲ್ಲೊಂದು ವಿಷಯಗಳ ಕುರಿತು ಹೊಸತನದ ವಿಡಿಯೊಗಳನ್ನು ಮಾಡುವ ಕೋಟ್ಯಂತರ ಮಂದಿ ಯೂಟ್ಯೂಬ್‌ನಲ್ಲಿ ಸಕ್ರಿಯವಾಗಿದ್ದಾರೆ.

ಇವರೆಲ್ಲರ ಮುಖ್ಯ ಉದ್ದೇಶ ವಿಡಿಯೊ ಕ್ರಿಯೇಟ್ ಮಾಡಿ ಯೂಟ್ಯೂಬ್ ವೇದಿಕೆಯಲ್ಲಿ ಹಂಚಿಕೊಳ್ಳುವುದು, ವೀಕ್ಷಣೆಯ ಮೇರೆಗೆ ಆದಾಯ ಗಳಿಸುವುದು. ಇದಕ್ಕಾಗಿ ಕಂಟೆಂಟ್ ಕ್ರಿಯೇಟರ್ಸ್ ದಿನ, ವಾರ, ತಿಂಗಳ ಕಾಲ ಸಮಯ ವ್ಯಯಿಸಿ ಕೆಲಸ ಮಾಡುತ್ತಾರೆ. ಆದರೆ, ಕಂಟೆಂಟ್ ಕ್ರಿಯೇಟರ್ಸ್ ಮಾಡುವ ಈ ಕೆಲಸವನ್ನು 'ವಿಇಒ3' ಬರೀ ಟೆಕ್ಸ್ಟ್ ಪ್ರಾಂಪ್ಟ್ ಮೂಲಕ ಕ್ಷಣಾರ್ಧದಲ್ಲಿ ಮಾಡಿಕೊಡುತ್ತದೆ.

### ಏನಿದು ವಿಇಒ 3?

ಗೂಗಲ್‌ನ ಎಐ ವಿಡಿಯೊ ಕ್ರಿಯೇಟಿಂಗ್ ಮಾಡ್ಯೂಲ್ ಆಗಿರುವ 'ವಿಇಒ3' ಟೆಕ್ಸ್ಟ್ ಪ್ರಾಂಪ್ಟ್‌ಗಳಿಂದ ವಿಡಿಯೊಗಳನ್ನು ರಚಿಸುವ ಎಐ ಸಾಧನವಾಗಿದೆ. ಕ್ಯಾಮೆರಾ ಅಥವಾ ವಿಡಿಯೊ ಚಿತ್ರೀಕರಿಸಲು ಬೇಕಾದ ಸಾಂಪ್ರದಾಯಿಕ ಸೆಟಪ್ ಅಗತ್ಯವಿಲ್ಲದೆಯೇ ವಿಡಿಯೊಗಳನ್ನು ರಚಿಸುವ ಸಾಮರ್ಥ್ಯವನ್ನು ಇದು ಹೊಂದಿದೆ.

'ವಿಇಒ3' ಕೇವಲ ವಿಡಿಯೊಗಳನ್ನು ಸಂಪಾದಿಸುವ ಸಾಧನವಲ್ಲ. ಅದು ಕೆಲವೇ ಪದಗಳ ಆಧಾರದ ಮೇರೆಗೆ ವಿಡಿಯೊ ರಚಿಸುವ ಸಾಮರ್ಥ್ಯದ ತಂತ್ರಜ್ಞಾನ. ಉದಾಹರಣೆಗೆ, ಮಗುವೊಂದು ಪೇಪರ್ ವಿಮಾನದೊಂದಿಗೆ ಆಟವಾಡುವ ವಿಡಿಯೊವು ಸಂಗೀತದೊಂದಿಗೆ ಬೇಕಿದ್ದಲ್ಲಿ ಆ ಕುರಿತ ಟೆಕ್ಸ್ಟ್ ಅನ್ನು, 'ವಿಇಒ3' ಫೀಚರ್‌ನ ಟೆಕ್ಸ್ಟ್ ಪ್ರಾಂಪ್ಟ್‌ನಲ್ಲಿ ಟೈಪಿಸಿದರೆ ಸಾಕು. ನೀವು ಬಯಸಿದ ವಿಡಿಯೊ ಕೆಲವೇ ಕ್ಷಣಗಳಲ್ಲಿ ಸಿದ್ಧವಾಗಿ ನಿಮ್ಮ ಮುಂದಿರುತ್ತದೆ. ಇಲ್ಲಿ, ಸಾಂಪ್ರದಾಯಿಕ ವಿಡಿಯೊ ರಚನೆಯಲ್ಲಿರುವ ರೆಕಾರ್ಡ್ ಮಾಡುವ ಅಗತ್ಯವಿಲ್ಲ, ಎಡಿಟಿಂಗ್ ಸಾಫ್ಟ್‌ವೇರ್ ಬಳಸಬೇಕಿಲ್ಲ. ವಿಡಿಯೊಗಳಿಗೆ ಧ್ವನಿ, ದೃಶ್ಯ ಮತ್ತು ಆಹ್ಲಾದಕರ ಬ್ಯಾಕ್‌ಗ್ರೌಂಡ್ ಸಹ ಸೇರಿಸಬಹುದು.

### ಕಂಟೆಂಟ್ ಕ್ರಿಯೇಟರ್ಸ್‌ಗೆ ಆತಂಕ

ಹೊಸ ಫೀಚರ್‌ನ ಮೂಲಕ ಯೂಟ್ಯೂಬ್ ಶಾರ್ಟ್ಸ್ ರಚಿಸುವುದು ಸಲೀಸಾದ ಕೆಲಸ. ಇನ್ನಷ್ಟು ಮಂದಿಯನ್ನು ಯೂಟ್ಯೂಬ್ ಶಾರ್ಟ್ಸ್‌ನಲ್ಲಿ ತೊಡಗಿಕೊಳ್ಳುವಂತೆ ಮಾಡಬಹುದು ಎಂಬುದು ಕಂಪನಿಯ ನಿಲುವು. ಆದರೆ, ಈ ಫೀಚರ್ ಕಂಟೆಂಟ್ ಕ್ರಿಯೇಟರ್ಸ್‌ಗಳಲ್ಲಿ ಆತಂಕ ಮೂಡಿಸಿದೆ. ಕಠಿಣ ಪರಿಶ್ರಮ ಹಾಕಿ ಕೆಲಸ ಮಾಡಿಕೊಂಡಿರುವ ಸಣ್ಣಮಟ್ಟದ ಕಂಟೆಂಟ್ ಕ್ರಿಯೇಟರ್ಸ್‌ಗೆ ತೊಡಕು ಉಂಟುಮಾಡುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಯೂಟ್ಯೂಬ್ ಶಾರ್ಟ್ಸ್, ಇನ್‌ಸ್ಟಾಗ್ರಾಂನ ರೀಲ್ಸ್, ಫೇಸ್‌ಬುಕ್‌ನ ವಿಡಿಯೊಗಳೆಲ್ಲವೂ ಜನರ ಆಸಕ್ತಿಗನುಸಾರವಾಗಿ ಅವರವರ ಟೈಮ್‌ಲೈನ್‌ನಲ್ಲಿ ಕಾಣಿಸಿಕೊಳ್ಳುತ್ತವೆ. ಇದನ್ನು ನಿರ್ವಹಣೆ ಮಾಡುತ್ತಿರುವುದು ಈ ಕಂಪನಿಗಳು ಬಳಸುವ ಅಲ್ಗರಿದಂ ಅನ್ನುವ ವ್ಯವಸ್ಥೆಯನ್ನು. ಯೂಟ್ಯೂಬ್‌ನ ಶಾರ್ಟ್ಸ್‌ನಲ್ಲಿ 'ವಿಇಒ3' ಬಳಸಿ ರಚಿಸುವ ವಿಡಿಯೊಗಳಿಗೆ ಹೆಚ್ಚಿನ ಆದ್ಯತೆ ಸಿಕ್ಕಿ, ನೈಜವಾಗಿ ಕಂಟೆಂಟ್ ಕ್ರಿಯೇಟ್ ಮಾಡುವವರಿಗೆ ವೀಕ್ಷಣೆಗಳು ಸಿಗದಿರುವ ಆತಂಕದಲ್ಲಿದ್ದಾರೆ.

ಇದರ ಇನ್ನೊಂದು ಆಯಾಮ ಎಂದರೆ, ಎಐನಿಂದ ರಚಿಸಲಾದ ವಿಡಿಯೊಗಳು ವೇದಿಕೆಯಲ್ಲಿ ಪ್ರಾಬಲ್ಯ ಸಾಧಿಸಿದರೆ ನಿಜವಾದ ಕಂಟೆಂಟ್ ಕ್ರಿಯೇಟರ್ಸ್‌ಗೆ ಅಷ್ಟು ಮನ್ನಣೆ ಸಿಗುವುದಿಲ್ಲ. ಯೂಟ್ಯೂಬ್‌ನಲ್ಲಿ ತೊಡಗಿರುವ ಶೇ. 25ಕ್ಕಿಂತ ಹೆಚ್ಚು ಜನರು ಶಾರ್ಟ್ಸ್‌ನಿಂದ ಹಣ ಗಳಿಸುತ್ತಿದ್ದಾರೆ. ಎಐ ತಮ್ಮ ಕೆಲಸವನ್ನು ವೇಗವಾಗಿ ಮತ್ತು ಕಡಿಮೆ ವೆಚ್ಚದಲ್ಲಿ ಮಾಡಲು ಸಾಧ್ಯವಾದರೆ ಅನೇಕ ಜನರು ತಮ್ಮ ಆದಾಯದ ಮೂಲವನ್ನು ಕಳೆದುಕೊಳ್ಳುವ ಆತಂಕವಿದೆ. ■

### ವೀಕ್ಷಕರ ಸಂಖ್ಯೆ ಹೆಚ್ಚಾಗುವ ನಿರೀಕ್ಷೆ

ಯೂಟ್ಯೂಬ್ ಪ್ರಕಾರ, ತನ್ನ ವೇದಿಕೆಯಲ್ಲಿ ಪ್ರತಿದಿನ 200 ಶತಕೋಟಿಗೂ ಹೆಚ್ಚು ಬಾರಿ ಶಾರ್ಟ್ಸ್ ವಿಡಿಯೊಗಳನ್ನು ಜನರು ವೀಕ್ಷಿಸುತ್ತಾರೆ. 'ವಿಇಒ 3' ಆಗಮನದ ನಂತರ ಈ ಸಂಖ್ಯೆ ಗಣನೀಯವಾಗಿ ಹೆಚ್ಚಾಗಬಹುದು ಎಂಬ ನಿರೀಕ್ಷೆಯನ್ನು ಯೂಟ್ಯೂಬ್ ಹೊಂದಿದೆ. ಅಲ್ಲದೇ ಹೆಚ್ಚೆಚ್ಚು ವೀಕ್ಷಣೆ ಸಿಕ್ಕಿ, ಕಂಟೆಂಟ್ ಕ್ರಿಯೇಟರ್ಸ್ ಆದಾಯವೂ ಹೆಚ್ಚಾಗಲಿದೆ.